

ಪೋಷಕರು ಮತ್ತೊಂದು ಮಗುವಿನೊಂದಿಗೆ ತುಲನೆ ಮಾಡಿದರೆ, ಮಕ್ಕಳಲ್ಲಿ ಅವರ ಯೋಗ್ಯತೆಯ ಮೇಲೆಯೇ ಅವರಿಗೆ ಸಂಶಯ ಶುರುವಾಗುತ್ತದೆ. ಇದರಿಂದ ಅವರ ಸಾಮರ್ಥ್ಯ ಕುಗ್ಗುತ್ತಾ ಹೋಗುತ್ತದೆ. ಬೆಳೆಯುವ ಮಕ್ಕಳಲ್ಲಿ ಭರವಸೆಯ ಬೀಜವನ್ನು ಬಿತ್ತಬೇಕು. ನಂತರ ಅದು ಹೆಮ್ಮರವಾಗಿ ಬೆಳೆಯುವಂತೆ ಪೋಷಿಸಬೇಕು. ಆಗ ಮಾತ್ರ ಏನನ್ನಾದರೂ ಸಾಧಿಸಲು ಸಾಧ್ಯ.

### ಕೀಳರಿಮೆ

ಮಕ್ಕಳನ್ನು ಸದಾ ಕಾಲ ಹೀಯಾಳಿಸುತ್ತಾ ಅಥವಾ ಮತ್ತೊಂದು ಮಗುವಿನೊಂದಿಗೆ ಹೋಲಿಸುತ್ತಾ ಇದ್ದರೆ, ಅವರಲ್ಲಿ ಕೀಳರಿಮೆ ಹೆಚ್ಚಾಗುತ್ತದೆ. ನಾಚಿಕೆ ಸ್ವಭಾವ ಮನೆ ಮಾಡುತ್ತದೆ. ಸಾಮಾಜಿಕ ಸಂಪರ್ಕವನ್ನು ಕಡಿಮೆ ಮಾಡತೊಡಗುತ್ತಾರೆ. ಒಂಟಿಯಾಗಿರಲು ಹೆಚ್ಚಾಗಿ ಬಯಸುತ್ತಾರೆ. ಒಂಟಿತನ ಖಿನ್ನತೆಗೆ ಹಾದಿ ತೋರುತ್ತದೆ. ತಮ್ಮ ಪೋಷಕರೊಂದಿಗೇ ಮುಕ್ತವಾಗಿ ಮಾತನಾಡುವ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತಾರೆ. ತಮ್ಮ ಮೇಲೆಯೇ ಗೌರವವನ್ನು ಕಳೆದುಕೊಳ್ಳುತ್ತಾರೆ. ಇದು ಖಂಡಿತಾ ಒಳ್ಳೆಯ ಸಂಗತಿಯಲ್ಲ. ತಿರುಗಿ ಬೀಳುವುದು, ಹಳಿಯುವಿಕೆ ಹಾಗೂ ಹೋಲಿಕೆ ಪುನರಾವರ್ತಿತವಾದಲ್ಲಿ ಕೆಲವು ಮಕ್ಕಳು ಬಂಡುಕೋರರಾಗುತ್ತಾರೆ. ಯಾರ ಮಾತಿಗೂ ಕಿವಿಗೊಡುವುದಿಲ್ಲ. ಹಠಮಾರಿತನ ಮಕ್ಕಳಲ್ಲಿ ಹೆಚ್ಚಾಗುತ್ತದೆ. ಇಂತಹ ಮಕ್ಕಳು ತಮ್ಮದೇ ಆದ ನಿಶ್ಚಿಂತೆಯ ಧೋರಣೆಯನ್ನು ಬೆಳೆಸಿಕೊಳ್ಳುತ್ತಾರೆ. ಈ ಬೇಡದ ಧೋರಣೆಯಿಂದ ಅವಿವೇಕದ ಕೆಲಸಗಳಿಗೆ ಕೈ ಹಾಕುತ್ತಾರೆ. ಇದು ಅಪರಾಧಿಗಳ ಉದಯಕ್ಕೆ ನಾಂದಿಯಾಗುತ್ತದೆ.

### ಪ್ರತಿಭೆಯ ದಮನ

ನಿಮ್ಮ ಮಗುವಿಗೆ ಹಾಡಿನಲ್ಲಿ ಆಸಕ್ತಿಯಿದ್ದು, ನೀವು ಆತನನ್ನು ಹಾಕಿ ಆಟಗಾರನಾಗಲು ಪ್ರೇರೇಪಿಸಿದಲ್ಲಿ, ಆತ ಎರಡರಲ್ಲೂ ಆಸಕ್ತಿಯನ್ನು ಕಳೆದುಕೊಳ್ಳುತ್ತಾನೆ. ತನಗಿಷ್ಟವಿಲ್ಲದ ಹಾಕಿ ಆಟ ಆಡಲು ಮನಸ್ಸಿರುವುದಿಲ್ಲ. ಇದೇ ಒತ್ತಡದಲ್ಲಿ ಇಷ್ಟವಿರುವ ಹಾಡುಗಾರಿಕೆಯನ್ನೂ ಹತ್ತಿಕ್ಕಲು ಪ್ರಯತ್ನಿಸುತ್ತಾನೆ. ಬೆಳೆಯುವ ಸಿರಿಯಲ್ಲಿಯೇ ನಿಮ್ಮ ಮಕ್ಕಳ ಪ್ರತಿಭೆಯನ್ನು ನೀವೇ ಚಿವುಟಿ ಹಾಕಿದಂತಾಗುತ್ತದೆ. ಇದು ಮಕ್ಕಳ ಬೆಳವಣಿಗೆಗೆ ಮಾರಕ.

### ಹಗೆತನ

ಮತ್ತೊಂದು ಮಗುವಿನೊಂದಿಗೆ ನಿಮ್ಮ ಮಗುವಿನ ಹೋಲಿಕೆಯು ಹಗೆತನಕ್ಕೆ ಕಾರಣವಾಗುತ್ತದೆ. ಯಾವ ಮಗುವಿನೊಂದಿಗೆ, ನಿಮ್ಮ ಮಗುವನ್ನು ಹೋಲಿಸುತ್ತೀರೋ ಆ ಮಗುವನ್ನು ನಿಮ್ಮ ಮಗು ತನಗೇ ತಿಳಿಯದಂತೆ ದ್ವೇಷಿಸತೊಡಗುತ್ತದೆ. ಚೆನ್ನಾಗಿ ಓದುವ ಅಥವಾ ಆಡುವ ಮಕ್ಕಳನ್ನು ಎಲ್ಲರೂ ಪ್ರೀತಿಸುತ್ತಾರೆ, ಗೌರವಿಸುತ್ತಾರೆ ಎನ್ನುವ ಬೇಡದ ವಿಷಯವನ್ನು ಪೋಷಕರೇ ಮಕ್ಕಳ ಮನದಲ್ಲಿ ತಮಗರಿವಿಲ್ಲದೇ ಬಿತ್ತುತ್ತಾರೆ. ಇದರಿಂದ ಮಕ್ಕಳಿಗೆ ತಮ್ಮ ಸಾಮರ್ಥ್ಯದ ಬಗ್ಗೆಯೇ ಅಲಕ್ಷ್ಯ ಉಂಟಾಗುತ್ತದೆ. ಹಗೆತನ ಎಂಬ ಮನೋಭಾವನೆಯನ್ನು ನಮ್ಮ ಮಗುವಿಗೆ ನಾವೇ ಕಲಿಸಿದಂತಾಗುತ್ತದೆ.

ಹಾಗಾದರೆ ಈ ಹೋಲಿಕೆ ಮಾಡುವುದೇ ತಪ್ಪೇ? ಖಂಡಿತಾ ಇಲ್ಲ. ಹೋಲಿಕೆ ಮಾಡುವುದರಲ್ಲೂ ಒಳ್ಳೆಯ ವಿಧಾನಗಳಿವೆ. ಅದರ ಮೂಲಕ ಮಕ್ಕಳಲ್ಲಿ ದ್ವೇಷ, ಅಸೂಯೆಗಿಂತ ಆರೋಗ್ಯಕರ ಸ್ಪರ್ಧಾತ್ಮಕ ಬೆಳವಣಿಗೆಯನ್ನು ಹುಟ್ಟುಹಾಕಬಹುದು. ಅದು ಮಕ್ಕಳಿಗೆ ಸಹಾಯಕವಾಗುತ್ತದೆ.

- ನಿಮ್ಮ ಮಗುವನ್ನು ಮತ್ತೊಂದು ಮಗುವಿಗೆ ಹೋಲಿಸುವುದಕ್ಕಿಂತ, ನಿಮ್ಮ ಮಗುವಿನ ಹಳೆಯ ಅಂಕವನ್ನು ಈ ಬಾರಿಯ ಅಂಕಕ್ಕೆ ಹೋಲಿಸಿ. ಕಡಿಮೆ ಅಂಕ ಬಂದರೂ ತೆಗಳಬೇಡಿ, ಹೀಯಾಳಿಸಬೇಡಿ. ಬದಲಿಗೆ ಮುಂದಿನ ಬಾರಿ ಚೆನ್ನಾಗಿ ಅಂಕ ಗಳಿಸುವಂತೆ ಹುರಿದುಂಬಿಸಿ. ಮಕ್ಕಳಲ್ಲಿ ಅವರ ಸಾಮರ್ಥ್ಯದ ಬಗ್ಗೆ ಭರವಸೆಯನ್ನು ಹುಟ್ಟು ಹಾಕಿ.
- ಒಂದೇ ಸಮನೆ ಮಕ್ಕಳ ಅಸಾಮರ್ಥ್ಯದ ವಿಷಯವನ್ನು ಎತ್ತಿ ಆಡುವುದನ್ನು ನಿಲ್ಲಿಸಿ. ಮಕ್ಕಳು ತಮಗೆ ಅರಿವಿರುವ ಅರ್ಧದಷ್ಟು ವಿಷಯವನ್ನು ಮಾತ್ರ ಹೇಳಿಕೊಳ್ಳುತ್ತಾರೆ! ಅವರು ಹೇಳದ ವಿಷಯಗಳು ಅವರಿಗೆ ತಿಳಿದಿಲ್ಲ ಎಂದು ಅರ್ಥವಲ್ಲ! ಅವರ ಪ್ರತಿಭೆಯನ್ನು ಗುರುತಿಸಿ, ಅದರ ಬಗ್ಗೆ ಮುಕ್ತವಾಗಿ ಹೊಗಳಿ, ಪುರಸ್ಕರಿಸಿ. ಅವರ ಆಸಕ್ತಿದಾಯಕ ವಿಷಯದಂತೆಯೇ ಮತ್ತೊಂದು ವಿಷಯದಲ್ಲೂ ಚೆನ್ನಾಗಿ ಮಾಡಬಹುದೆಂದು ತಿಳಿಸಿ. ಯಾವ ವಿಷಯಕ್ಕಾದರೂ ಅವರ ಸಹಾಯಕ್ಕಾಗಿ ಪೋಷಕರಾಗಿ ನೀವಿದ್ದೀರೆಂದು ಮನದಟ್ಟು ಮಾಡಿಸಿ.
- ಎಲ್ಲಾ ಪೋಷಕರೂ ತಮ್ಮ ಮಕ್ಕಳನ್ನು ಪ್ರೀತಿಸುತ್ತಾರೆ. ಅವರಿಗೆ ಒಳ್ಳೆಯದಾಗಲಿ ಎಂದು ಸದಾ ಅವರ ಅಭ್ಯುದಯವನ್ನೇ ಬಯಸುತ್ತಾರೆ. ಆದರೆ ಪ್ರೀತಿಯನ್ನು ವ್ಯಕ್ತಪಡಿಸುವ ರೀತಿ ಬದಲಾಗಬೇಕು. ನೀವು ನಿಮ್ಮ ಮಕ್ಕಳನ್ನು ಪ್ರೀತಿಸುತ್ತೀರೆಂದು ಅವರಿಗೆ ತಿಳಿಯಬೇಕು. ನೀವು ಹೇಳುವುದು ಅವರ ಒಳಿತಿಗಾಗಿ ಎಂಬುದು ಅವರ ಗಮನಕ್ಕೆ ಬರಬೇಕು. ನಿಮ್ಮ ಬೆಂಬಲ ಸದಾ ಅವರೊಟ್ಟಿಗೆ ಇದೆ ಎಂಬುದು ಅವರಿಗೆ ತಿಳಿಯಬೇಕು.
- ನಿಮ್ಮ ಮಗುವಿಗೆ ಆಸಕ್ತಿಯಿಲ್ಲದ ವಿಷಯದಲ್ಲಿ ಸುಳ್ಳು ಭರವಸೆಗಳನ್ನು ನಿಮ್ಮಿಷ್ಟಕ್ಕಾಗಿ ತುಂಬಬೇಡಿ. ನಿಮ್ಮ ಪ್ರೋತ್ಸಾಹ, ಸಹಕಾರ, ಬೆಂಬಲ ಎಷ್ಟೇ ಇದ್ದರೂ, ಆಸಕ್ತಿಯಿಲ್ಲದ ವಿಷಯದಲ್ಲಿ ಏನನ್ನೂ ಸಾಧಿಸಲು ಸಾಧ್ಯವಿಲ್ಲ. ನಿಮ್ಮ ಮಕ್ಕಳಿಗೆ ಏನಿಷ್ಟವೋ ಅದನ್ನೇ ಪ್ರೋತ್ಸಾಹಿಸಿ. ಬೇರೆಯವರ ಎದುರಿಗೆ ನಿಮಗೆ ಅವಮಾನವಾಗುತ್ತದೆಂದು ಮಕ್ಕಳನ್ನು ಒತ್ತಡಕ್ಕೆ ಸಿಲುಕಿಸಬೇಡಿ.